# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1654 |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಸಿಂಧನೂರು ತಾಲ್ಲೂಕಿನ ಪಿಡಬ್ಲೂಡಿ ಕ್ಯಾಂಪಿನಿಂದ ಅಲಬನೂರು-ಜವಳಗೇರಾ-ಬಳಗನೂರು ಮಾರ್ಗವಾಗಿ ಮುಸ್ಕಿವರೆಗಿನ ಸುಮಾರು 37 ಕಿ.ಮೀ ರಸ್ತೆಯಲ್ಲಿ ಅಧಿಕ ಸಂಖ್ಯೆ ಸಾರ್ವಜನಿಕ ಮತ್ತು ಇತರೆ ಖಾಸಗಿ ವಾಹನಗಳು ದಿನನಿತ್ಯ ಚಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸದರಿ ರಸ್ತೆಯನ್ನು ಸುರಕ್ಷತೆ ಹಾಗೂ ಸುಗಮ ಸಂಚಾರದ ಹಿತದೃಷ್ಟಿಯಿಂದ ರಾಜ್ಯ ಹೆದ್ದಾರಿಯಾಗಿ ಘೋಷಿಸುವ ಕುರಿತು ಸರ್ಕಾರದ ನಿಲುವೇನು; | ಸದರಿ ರಸ್ತೆಯು ಮಸ್ಕಿ (ರಾ.ಹೆ.150ಎ) ದಿಂದ ಜವಳಗೇರಾ ಅಲಬನೂರು-ಸಿಂಧನೂರು-ಬಪ್ಪೂರು-ಕಿಲ್ಲಾರಹಟ್ಟಿ ರಸ್ತೆ ಕಿ.ಮೀ.0.00 ರಿಂದ 88.36 ರವರೆಗೆ ಸರ್ಕಾರ ಆದೇಶ ಸಂ:ಲೋಇ ಇ-85/28 ಇಎಪಿ 2020, ದಿನಾಂಕ:01-09-2020 ರನ್ವಯ ರಾಜ್ಯ ಹೆದ್ದಾರಿ-197 ಆಗಿ ಮೇಲ್ದರ್ಜೆಗೇರಿಸಲಾಗಿದೆ. ಪ್ರಸ್ತುತ ಸದರಿ ರಸ್ತೆಯು 5.50 ಮೀ. ಅಗಲವಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿರುತ್ತದೆ. |
| ಇ) | ಯಾವ ಕಾಲಮಿತಿಯೊಳಗೆ ಸದರಿ ರಸ್ತೆಯನ್ನು ರಾಜ್ಯ ಹೆದ್ದಾರಿ ಯಾಗಿ ಮೇಲ್ದರ್ಜೆಗೇರಿಸಿ, ಅಭಿವೃದ್ಧಿಗೊಳಿಸಲಾಗುವುದು? | • 2021-22ನೇ ಸಾಲಿನ ಅಪೆಂಡಿಕ್ಸ್-ಇ ನಲ್ಲಿ ರೂ.3.00 ಕೋಟಿ ಮೊತ್ತದಲ್ಲಿ ಕಿ.ಮೀ.54.70 ರಿಂದ 59.70 ರವರೆಗೆ 5.00 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.<br>• 2024-25ನೇ ಸಾಲಿನಲ್ಲಿ ಎಸ್.ಹೆಚ್.ಡಿ.ಪಿ. ಘಟ್ಟ-5, ಹಂತ-1 ರಲ್ಲಿ ಕಿ.ಮೀ.61.20 ರಿಂದ 66.00 ಮತ್ತು ಕಿ.ಮೀ.74.50 ರಿಂದ 89.20 ರವರೆಗೆ ಒಟ್ಟು 19.50 ಕಿ.ಮೀ. ಉದ್ದದ ರಸ್ತೆಯನ್ನು ರೂ.20.00 ಕೋಟಿ ಮೊತ್ತದಲ್ಲಿ ಅಭಿವೃದ್ಧಿಗೆ ಪರಿಗಣಿಸಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>• 2025-26ನೇ ಸಾಲಿನಲ್ಲಿ ಸಿ.ಎಂ.ಐ.ಡಿ.ಪಿ. ಯೋಜನೆಯಲ್ಲಿ ರೂ.17.90 ಕೋಟಿ ಮೊತ್ತದಲ್ಲಿ 27.20 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಪಡಿಸಲು 03 ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಹಂತದಲ್ಲಿರುತ್ತದೆ. |

ಸಂಖ್ಯೆ: ಲೋಇ 85 ಸಿಐಎಸ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ-1

## ಮಾನ್ಯ ವಿಧಾನ ಸಭೆಯ/ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಬಸನಗೌಡ ಬಾದರ್ಲಿ ಅವರ ಪ್ರಶ್ನೆ ಸಂಖ್ಯೆ: (1654) 1405ಕ್ಕೆ ಉತ್ತರಗಳು

### ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ರಾಜ್ಯದಲ್ಲಿನ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಓದಲಾಗಿದೆ:-ದಿನಾಂಕ 03-06-2020 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಲೋಕೋಪಯೋಗಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

---

ಪ್ರಸ್ತಾವನೆ:-

ಲೋಕೋಪಯೋಗಿ ಇಲಾಖೆಯ ವತಿಯಿಂದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಹಾಗೂ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ 7252 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿ, 19500 ಕಿಮೀ ಉದ್ದದ ರಾಜ್ಯ ಹೆದ್ದಾರಿ, 49603 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳ ಮತ್ತು ಸುಮಾರು 1,93,081 ಕಿಮೀ ಉದ್ದದ ಗ್ರಾಮೀಣ ರಸ್ತೆಗಳು ಇರುತ್ತವೆ. ಈ ರಸ್ತೆಗಳನ್ನು ಇಲಾಖೆಯ ಅನುದಾನದಲ್ಲಿ ನಿರ್ವಹಣೆ ಹಾಗೂ ಸುಧಾರಣೆ ಮಾಡಲಾಗುತ್ತಿದೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ರಸ್ತೆಗಳನ್ನು ಕಾಲಕಾಲಕ್ಕೆ ವಾಹನಗಳ ಸಾಂದ್ರತೆ, ಮಾರುಕಟ್ಟೆಗಳ ಜೋಡುವಿಕೆ, ಪ್ರೇಕ್ಷಣೀಯ ಸ್ಥಳಗಳ ಜೋಡುವಿಕೆ, ಕೈಗಾರಿಕಾ ಪ್ರದೇಶಗಳ ಜೋಡುವಿಕೆ ಬಗ್ಗೆ ಕೂಲಂಕಷವಾಗಿ ಪರಿಗಣಿಸಿ ಮೇಲ್ದರ್ಜೆಗೇರಿಸುವುದು ಅವಶ್ಯಕವಾಗಿರುತ್ತದೆ. ಹಲವಾರು ವರ್ಷಗಳಿಂದ ಗ್ರಾಮೀಣ ರಸ್ತೆಗಳನ್ನು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಉನ್ನತೀಕರಿಸದಿರುವುದರಿಂದ, ಸದರಿ ರಸ್ತೆಗಳಲ್ಲಿ ವಾಹನ ಸಂಚಾರ ದಟ್ಟಣೆಯು ಅಧಿಕವಾಗಿದ್ದರೂ ಸಹ ಐ.ಆರ್.ಸಿ. ಮಾನದಂಡಗಳನ್ವಯ ನಿರ್ವಹಣೆ ಮಾಡದಿರುವುದರಿಂದ ಆಗಾಗ್ಗ ದುರಸ್ತಿಗೆ ಒಳಪಡುತ್ತಿದ್ದು, ಸರ್ಕಾರಕ್ಕೆ ಅನಗತ್ಯ ಆರ್ಥಿಕ ಹೊರೆ ಉಂಟಾಗುತ್ತಿದ್ದು, ರಾಜ್ಯದಲ್ಲಿನ ರಸ್ತೆಗಳ ಅಭಿವೃದ್ಧಿ ಮತ್ತು ಸುಸ್ಥಿರ ಮೂಲ ಸೌಕರ್ಯ ನಿರ್ಮಿಸುವ ನಿಟ್ಟಿನಲ್ಲಿ 1329 ಸಂಖ್ಯೆಯ 15510 ಕಿಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಹಾಗೂ 226 ಸಂಖ್ಯೆಯ 9601 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವುದು ಅಗತ್ಯವಾಗಿರುತ್ತದೆ ಎಂದು ಪ್ರಸ್ತಾವನೆಯನ್ನು ಪ್ರಧಾನ ಇಂಜಿನಿಯರ್, PRAMC ರವರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಓದಲಾದ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 16,760.00ಕಿಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಹಾಗೂ 10110 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಿರುತ್ತಾರೆ.

ಅದರಂತೆ, ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಕಾರಣಗಳು ಪ್ರಮುಖವಾಗಿರುತ್ತದೆ.

- ಮಾನ್ಯ ಶಾಸಕರುಗಳು ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು (One Time Improvement) ಲೋಕೋಪಯೋಗಿ ಇಲಾಖೆಗೆ ಒತ್ತಾಯಿಸುತ್ತಿದ್ದಾರೆ.
- ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಈಗಾಗಲೇ ಅಭಿವೃದ್ಧಿಪಡಿಸಲಾದ ರಸ್ತೆಗಳನ್ನು ಸಮರ್ಪಕವಾಗಿ ನಿರ್ವಹಣೆ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು.

Scanned with CamScanner

ಅನುಬಂಧ-2

ಮಾನ್ಯ ವಿಧಾನ ಸಭೆಯ/ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಬಸನಗೌಡ ಬಾದರ್ಲಿ ಅವರ ಪ್ರಶ್ನೆ ಸಂಖ್ಯೆ:(1654) 1405 ಕ್ಕೆ ಉತ್ತರಗಳು

| ಕ್ರ. ಸಂ. | ತಾಲೂಕ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ | ಕಾಮಗಾರಿ ಪ್ರಾರಂಭಿಸಿದ ದಿನಾಂಕ | ಗುತ್ತಿಗೆ ಪ್ರಕಾರ ಕಾಮಗಾರಿ ಮುಕ್ತಾಯಗೊಳಿಸಬೇಕಾದ ದಿನಾಂಕ | ಅಭಿವೃದ್ಧಿಪಡಿಸಬೇಕಾದ ಉದ್ದ ಕಿ.ಮೀ ಗಳಲ್ಲಿ/ಸಂಖ್ಯೆ | ಪ್ರಸ್ತುತ ತಿಂಗಳ ಅಂತ್ಯಕ್ಕೆ ಅಭಿವೃದ್ಧಿಪಡಿಸಲಾದ ಉದ್ದ ಕಿ.ಮೀ ಗಳಲ್ಲಿ/ಸಂಖ್ಯೆ | ಕಾಮಗಾರಿಯ ಹಂತ |
|---|---|---|---|---|---|---|---|---|---|---|
| | | 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ: 5054-03-337-0-17-154 ರಾಜ್ಯ ಹೆದ್ದಾರಿಗಳ ಸುಧಾರಣೆ | | | | | | | | |
| 1 | ಸಿಂಧನೂರು (ಮಸ್ಕಿ ಮತಕ್ಷೇತ್ರ) | ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಮಸ್ಕಿ (150ಎ) ಜವಳಗೇರಾ, ಆಲಬನೂರು, ಬಪ್ಪೂರು, ಕಿಲರಟ್ಟಿ ರಸ್ತೆ ಕಿ.ಮೀ. 54.70 ರಿಂದ 59.70 (54.70 ರಿಂದ 56.598)ರ ವರೆಗೆ ರಸ್ತೆ ಅಭಿವೃದ್ಧಿ. (149548) | 300.00 | VENKATESH | 328.96 | 20-06-22 | 19-08-22 | 1.900 | 1.900 | Physically work completed. Final Bill received. |
| | | ಒಟ್ಟು | 300.00 | | 328.96 | | | 1.900 | 1.900 | |
| | | 2024-25ನೇ ಸಾಲಿನ ಎಸ್.ಹೆಚ್.ಡಿ.ಪಿ. ಫೇಜ್-5 ಸ್ಟೇಜ್-1ರಲ್ಲಿ | | | | | | | | |
| 1 | ಸಿಂಧನೂರು (ಮಸ್ಕಿ ಮತಕ್ಷೇತ್ರ) | PKG NO 642 Improvements to road SH-197 connecting Maski Textile Alabanur Bappur Jagalagera Kilarahatti Road in Sindhanur Taluk of Raichur District from Ch: 61.20 KM to 66.00 KM and Ch: 74.50 KM to 89.20 KM (in selected reaches) in Maski Taluk of Raichur District | 2000.00 | M/s Meco Constructions & Infratech Pvt.Ltd., | 2025.14 | 29-08-2024 | 28-07-2025 | 7.370 | 3.780 | BC of 3.78 km Work in progress |
| | | ಒಟ್ಟು | 2000.00 | | 2025.14 | | | 7.370 | 3.780 | |
| | | 2025-26ನೇ ಸಾಲಿನ ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯ | | | | | | | | |
| 1 | ಸಿಂಧನೂರು / ಮಸ್ಕಿ | ಮಸ್ಕಿ ವಿಧಾನಸಭಾ ಕ್ಷೇತ್ರದ ಮಸ್ಕಿ ವಾಲ್ಮೀಕಿ ವೃತ್ತ (ಎನ್.ಹೆಚ್-150ಎ) ದಿಂದ ಜವಳಗೇರಾ, ಆಲಬನೂರು, ಸಿಂಧನೂರು, ಕುರುಕುಂದಾ ಬಳ್ಳೂರು, ಕಿಲ್ಲಾರಹಟ್ಟಿ ರಸ್ತೆಯ (ಎಸ್.ಹೆಚ್-197) ಕಿ.ಮೀ 82.10 ರಿಂದ ಕಿ.ಮೀ 83.40 ಸಿಸಿ ರಸ್ತೆ ಕಾಮಗಾರಿ. (29733) | 200.00 | - | - | - | - | - | - | Technical bid under evaluation. |
| 2 | ಸಿಂಧನೂರು / ಮಸ್ಕಿ | ಮಸ್ಕಿ ವಿಧಾನಸಭಾ ಕ್ಷೇತ್ರದ ಮಸ್ಕಿ ವಾಲ್ಮೀಕಿ ವೃತ್ತ (ಎನ್.ಹೆಚ್-150ಎ) ರಿಂದ ಜವಳಗೇರಾ, ಆಲಬನೂರು, ಸಿಂಧನೂರು, ಕುರುಕುಂದಾ ಬಪ್ಪರು, ಕಿಲ್ಲಾರಹಟ್ಟಿ ರಸ್ತೆಯ (ಎಸ್.ಹೆಚ್-197) ಕಿ.ಮೀ 1.00 ರಿಂದ ಕಿ.ಮೀ 18.00 ರವರೆಗೆ ರಸ್ತೆ ಅಭಿವೃದ್ಧಿ ಪಡಿಸುವುದು. (30493) | 600.00 | - | - | - | - | - | - | Technical bid under evaluation. |
| 3 | ಸಿಂಧನೂರು | ರಾಜ್ಯ ಹೆದ್ದಾರಿ-197 ಎಂಎಂ ನಿಂದ ಜವಗೇರಾ-ಆಲಬನೂರು-ಸಿಂಧನೂರು-ಬಟ್ಟೂರು-ಕಿಲಾರಟ್ಟಿ ರಸ್ತೆ, ಕಿ.ಮೀ 40.10 ರಿಂದ ಕಿ.ಮೀ 49.00 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (32040) | 990.00 | - | - | - | - | - | - | Technical bid under evaluation. |
| | | ಒಟ್ಟು | 1790.00 | | 0.00 | | | 0.00 | 0.00 | |

ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ,
ರಾಯಚೂರು